**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 184/2020**

ಪಿಡಬ್ಲ್ಯೂ -1

**ದಿನಾಂಕ 11-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. ಮುಂದುವರೆದ ಪಾಟೀ ಸವಾಲು ಶ್ರೀ ಪಿ ಡಿ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನಾನು ವ್ಯವಸಾಯವನ್ನು ಮಾಡುತ್ತೇನೆ. ನಾನು ದಾವಾ ಷೆಡ್ಯೂಲ್ ಸ್ವತ್ತಿಗೆ ಯಾವುದೇ ಸರ್ವೇ ಮತ್ತು ಹದ್ದು ಬಸ್ತು ನಕ್ಷೆಯನ್ನು ಮಾಡಿಸಿರುವುದಿಲ್ಲ. ವಾದಿ ರತ್ನಮ್ಮಾ ನನ್ನ ಅಕ್ಕ ಒಟ್ಟು ನಾವು 6 ಜನ ಮಕ್ಕಳು 3 ಗಂಡು ಮತ್ತು 3 ಹೆಣ್ಣು. ಅವರ ಹೆಸರು ತುಕಾರಾಮ, ಡಾ. ಶಾಮಣ್ಣ, ರತ್ನಮ್ಮಾ, ಕಮಲಮ್ಮಾ, ಲಲೀತಮ್ಮಾ ಮತ್ತು ಜಗನಾಥನಾದ ನಾನು.

ಎಲ್ಲರೂ ಸಹ 1972 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ಯಾರು ಸಹ ಅವರ ಅವರ ಪಾಲಿಗೆ ಬಂದ ಭಾಗದ ಸ್ವತ್ತುಗಳನ್ನು ಉಳಿಸಿಕೊಂಡಿದ್ದು ಯಾರು ಸಹ ಮಾರಾಟ ಮವಡಿರುವುದಿಲ್ಲ. ಸಾಕ್ಷಿ ಮುಂದುವರೆ ತುಕಾರಮ ತೀರಿಕೊಂಡಿದ್ದು ನಮ್ಮ ಅಣ್ಣನ ಮಕ್ಕಳು ಅವರ ಭಾಗದ 23 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ.

ಪ್ರತಿವಾದಿ ನಟರಾಜು ರವರು ಸರ್ಕಾರದಿಂದ ವಸತಿ ಯೊಜನೆಯಡಿ ಸಾಲ ಸೌಲಭ್ಯವನ್ನು ಪಡೆದು ಮನೆಯನ್ನು ನಿರ್ಮಾಸಿದ್ದಾರೆ ಎಂದರೆ ಸರಿಯಲ್ಲ. ತುಕಾರಾಮ, ಡಾ. ಶಾಮಣ್ಣ, ಮತ್ತು ನಾನು ಸೇರಿಕೊಂಡು 4 ಗುಂಟೆ ಜಮೀನು ಚೆನ್ನೆಗೌಡರ ಹೆಂಡತಿ ಕಮಲಮ್ಮ ವರಿಗೆ ದಿಃ 23-08-1967 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ನಾನು ಸದರಿ ಸಮಯದಲ್ಲಿ ಅಪ್ರಾಪ್ತ ನಾಗಿದ್ದು ನನಗೆ ಸದರಿ ಕ್ರಯ ಪತ್ರದ ಬಗ್ಗೆ ಗೊತ್ತಿರುವುದಿಲ್ಲ ವೆಂದು ನಂತರ ಬೇರೆ ಜಮೀನು ಎಂದು ತಿಳಿಸಿರುತ್ತಾರೆ. ನನಗೆ ಸದರಿ ಮಾರಾಟ ಮಾಡಿದ ಜಮೀನಿನ ಸರ್ವೇ ಗೊತ್ತಿರುವುದಿಲ್ಲ.

ವಾದಿ ರತ್ನಮ್ಮಾ ರವರಿಗೆ ನಾನು ತುಕಾರಾಮ ಮತ್ತು ಡಾ. ಶಾಮಣ್ಣ, ದಿಃ 23-08-1967 ರಲ್ಲಿ ಮಾರಾಟ ಮಾಡಿದ ಜಮೀನಿನ ಮೇಲೆ ಹಕ್ಕು ಇರುವುದಿಲ್ಲ ಎಂದು ಸಾಕ್ಷಿ ಮುಂದುವರೆದು ಈ ದಾವೆಯ ಜಮೀನು ಬೇರೆ ಎಂದು ತಿಳಿಸಿರುತ್ತಾರೆ. ಕಮಲಮ್ಮ ರವರು ಕೊಂಡುಕೊಂಡಿರುವ ಜಮೀನನ್ನು ದಿಃ 17.07.1977 ರಂದು ಮೂಡಲಗಿರಿ ಹೆಂಡತಿ ರಾಜಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ರಾಜಮ್ಮ ರವರು ದಿಃ 25-01-2010 ರಲ್ಲಿ ಸದರಿ ಜಮೀನನ್ನು ಪ್ರತಿವಾದಿ ನಟರಾಜು ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೂತ್ತಿರುವುದಿಲ್ಲ. ಸದರಿ ಪ್ರತಿವಾದಿಯವರು ಕೊಂಡುಕೊಂಡಿರುವ ಜಮೀನಿನ ಚೆಕ್ ಬಂದಿ. ಪೂ - ರಾಮಾಚಾರಿ ಜಮೀನು ಪ- ರತ್ನಮ್ಮಾ ರವರ ಜಮೀನು ಉ - ಜಯರಾಮ ಮತ್ತು ರಾಜೀವ ರವರ ಜಮೀನು ದ-ರಸ್ತೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಚೆಕ್ ಬಂದಿಯ ಒಳಗಡೆ ಪ್ರತಿವಾದಿ ಸರ್ಕಾರದ ರಾಜೀವ ಗಾಂಧಿ ವಸತಿ ಯೊಜನೆಯಡಿ ಸಾಲವನ್ನು ಪಡೆದು 30 x 30 ಮನೆಯನ್ನು ನಿರ್ಮಿಸಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಅಕ್ರಮವಾಗಿ ನಿರ್ಮಿಸಿಕೊಂಡಿರಬಹುದು ಎಂದು ತಿಳಿಸಿರುತ್ತಾರೆ.

ನಾವು ಪ್ರತಿವಾದಿ ಅಕ್ರಮವಾಗಿ ಮನೆಯನ್ನು ಒತ್ತುವರಿ ಮಾಡಿ ಕಟ್ಟಿಕೊಂಡಿರುವುದಾಗಿ ನಾವು ತಹಶೀಲ್ದಾರಿಗೆ ಯಾವುದೇ ಅರ್ಜಿಯನ್ನು ನೀಡಿ ಅಳತೆ ಮತ್ತು ನಕ್ಷೆಯನ್ನು ಮಾಡಿಸಿರುವುದಿಲ್ಲ. 2020 ರಲ್ಲಿ ಜಮೀನಿನ ಅಳತೆಯನ್ನು ಮಾಡಿಸಿ ಒತ್ತುವರಿ ಮಾಡಿದ ಬಗ್ಗೆ ಖಚಿತ ಪಡಿಸಿಕೊಂಡಿರುತ್ತೇವೆ. ಸದರಿ ಸರ್ವೇ ವರದಿ ಮತ್ತು ನಕ್ಷೆಯನ್ನು ನಾವು ಹಾಜರು ಪಡಿಸಿರುವುದಿಲ್ಲ. ದಾವಾ ಷಡ್ಯೂಲ್ ಸ್ವತ್ತಿಗೆ ಸಂಬಂಧಸಿದ ನಕ್ಷೆಯನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಸಿದಂತೆ ಯಾವುದೇ ಅಳತೆಯನ್ನು ಮಾಡಿ ಯಾವುದೇ ನಕ್ಷ ಯನ್ನು ಸಹ ತಯಾರು ಮಾಡದೇ ಇದ್ದರೂ ಸಹ ಪ್ರತಿವಾದಿ ವಿರುದ್ಧ ನಿರಾಧಾರವಾಗಿ ಒತ್ತುವರಿ ಮಾಡಿದ್ದಾಗಿ ಸುಳ್ಳು ದಾವೆಯನಲ್ಲು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ರಾಜಮ್ಮ ರವರ ಕಡೆಯಿಂದ ಖರೀದಿಸಿದ 4 ಗುಂಟೆ ಜಮೀನಿಗೂ ಹನಾಗೂ ವಾದಿಗೂ ಯಾವುದೇ ಸಬಂಧ ಇರುವುದಿಲ್ಲ ಎಂದರೆ ಸಾಕ್ಷಿ ಎರಡೂ ಬೇರ ಬೇರೆ ಜಮೀನು ಎಂದು ತಿಳಿಸಿರುತ್ತಾರೆ. ಸರ್ವೇ ನಂ 194 ರಲ್ಲಿ ಎಷ್ಟು ಪೊಡುಗಳಾಗಿ ಎಷ್ಟು ಜನ ಖಾತೆದಾರರು ಸ್ವಾಧೀನದಲ್ಲಿದ್ದಾರೇ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸ ನಂ. 194 ನ್ನು ಅಳತೆ

ಮಾಡಿಸಿ  ಯಾವುದೇ ನಕ್ಷೆಯನ್ನು ತಯಾರಿಸಿ ಹಾಜರು ಪಡಿಸಿರುವುದಿಲ್ಲ.  ಪ್ರತಿವಾದಿ ತನ್ನ 4 ಗುಂಟೆ ಜಮೀನಿನಲ್ಲ ಮನೆಯನ್ನು ನಿರ್ಮಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ.

ಪ್ರತಿವಾದಿ ಪತ್ರದ ಚೆಕ್ಬಂದಿ ಒಪಳಗಡೆ ಮನೆಯನ್ನು ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ರಾಜೀವ ಗಾಂಧಿ ವಸತಿ ಯೋಜನೆಯಡಿ ಸಾಲವನ್ನು ಪಡೆದುಕೊಂಡು ತನ್ನ ಜಮೀನಿನಲ್ಲಿ ಮನೆಯನ್ನು ಕಾನೂನುಬದ್ಧವಾಗಿ ನಿರ್ಮಿಸಿಕೂಂಡಿದ್ದರ ಸಹ ಯಾವುದೇಲ ದಾಖಲೆಗಳು ಇಲ್ಲದೆ ಪ್ರತಿವಾದಿ ಒತ್ತುವರಿ ಮಾಡಿದ್ದಾಗಿ  ಪ್ರತಿವಾದಿಯ ವಿರುದ್ದ ನಿರಾಧಾರವಾಗಿ  ಸುಳ್ಳು  ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ರತ್ನಮ್ಮಾ ರವರಿಗೆ  ಸೇರಿದ ಯಾವುದೇ ಜಮೀನನ್ನು ಒತ್ತುವರಿ ಮಾಡದೇ  ಪ್ರತಿವಾದ ಪತ್ರದ ಚೆಕ್ ಬಂದಿಯ ಒಳಗಡೆ ಮನೆಯನ್ನು ನಿರ್ಮಿಸಿಕೊಂಡು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ .

ಈ ಹಂತದಲ್ಲಿ ಪ್ರತಿ ವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ